ಅ.ದಾ.ನಂ.420/2016
ಪಿ.ಡಬ್ಲ್ಯೂ:1

**ಸಾಕ್ಷಿಯನ್ನು ಇಂದು ದಿನಾಂಕಃ 02.09.2025 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು**
**ಪಾಟೀ ಸವಾಲುಃ ಶ್ರೀ. ವಿ ಬಿ ಎಮ್., ವಕೀಲರಿಂದ ಪ್ರತಿವಾದಿ ಪರವಾಗಿ**

1. ನಾನು ಈ ದಾವೆಯಲ್ಲಿ ಪಕ್ಷಗಾರನಾಗಿಲ್ಲ ಎಂದರ ಸರಿ. ಸಾಕ್ಷಿಯು ಮುಂದುವರೆದು ನಾನು ವಾದಿಯಿಂದ ಅಧಿಕಾರ ಪಡೆದಿರುತ್ತೇನೆ ಎಂದು ಹೇಳುತ್ತಾರೆ. ವಾದಿಯರು ಈ ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿಯರು ಅಶಕ್ತರಾಗಿರುವುದರಿಂದ ನನಗೆ ಅಧಿಕಾರ ಪತ್ರವನ್ನು ಕೊಟ್ಟಿರುತ್ತಾರೆ. ನನಗೆ ವಾದಿಗಳು ಮೂರು ಜನರು ಸೇರಿ ಅಧಿಕಾರ ಪತ್ರವನ್ನು ಕೊಟ್ಟಿರುತ್ತಾರೆ. ವಾದಿಗಳು ಸದೃಢವಾಗಿದ್ದರೂ ಕೂಡಾ ಅವರು ಅಶಕ್ತರಾಗಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ 1 ನೇ ವಾದಿ ಮಾತ್ರ ಜಿ.ಪಿ.ಎಯನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಮಾರು ಜನರು ಸೇರಿ ಜಿಪಿಎಯನ್ನು ಬರೆದುಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. 1 ನೇ ವಾದಿಗೆ 59 ವರ್ಷ ವಯಸ್ಸು ಇರುತ್ತದೆ.

2. ದಾವಾ ಆಸ್ತಿಯ ಸರ್ವೇ ನಂ.338/2 ಇರುತ್ತದೆ. ದಾವಾ ಆಸ್ತಿಯ ಚಕಬಂದಿ ಉತ್ತರಕ್ಕೆಃ ಪ್ರಕಾಶ ಪಾಟೀಲರವರ ಜಮೀನು ಅದರ ಸರ್ವೇ ನಂ.338 ಇರುತ್ತದೆ, ಪಶ್ಚಿಮಕ್ಕೆಃ ಸರ್ವೇ ನಂ. 348 ರ ಆಸ್ತಿಯ ಇರುತ್ತದೆ, ಪೂರ್ವಕ್ಕೆಃ ಸರಕಾರಿ ರಸ್ತೆ ಮತ್ತು ದಕ್ಷಿಣಕ್ಕೆಃ ಸರಕಾರಿ ರಸ್ತೆ ಇರುತ್ತದೆ. ನಾನು ದಾವಾ ಆಸ್ತಿಗೆ ಸುಳ್ಳು ಚಕಬಂದಿಯನ್ನು ಹೇಳಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಸಾಗುವಳಿ ಜಮೀನು ಇರುತ್ತದೆ ಎಂದರೆ ಸರಿ. ವಾದಿಗಳು ಮೂರು ಜನರು ಖಾಸ ಅಣ್ಣತಮ್ಮಂದಿರು ಅಲ್ಲ ಎಂದರೆ ಅವರು ಮೂರು ಜನ ಸಂಬಂಧಿಕರು ಆಗಿರುತ್ತಾರೆ ಎಂದು ಹೇಳುತ್ತಾರೆ. 1 ನೇ ವಾದಿಯು ನನ್ನ ಅಳಿಯನಾಗಬೇಕು.

**ಈ ಹಂತರದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಾವಕಾಶ ಕೋರಿದ್ದರಿಂದ ಸಮಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

**ಹೆಚ್ಚುವರಿ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,**
**ಬಸವನ ಬಾಗೇವಾಡಿ.**